ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Raw Film Industry ವಿಷಯದಲ್ಲಿ ಈಗ ನೀವು ಹೇಳಿರತಕ್ಕಂಥ ಉತ್ತರದಿಂದ ಸರಕಾರದ ಮುಂದೆ ಈ ವಿಷಯ ಇದೆ ಎಂದು ಅರ್ಥವಾಗುತ್ತದೆ. ಮತ್ತು ಲಿಖಿತ ಉತ್ತರದಿಂದ ಗೊತ್ತಾಗುವುದೇನೆಂದರೆ ಇದಕ್ಕೆ ಸ್ವಲ್ಪ ಜೀವ ದಾನ ಮಾಡುತ್ತೀರಿ ಎಂದು. Then which is correct ?

ಶ್ರೀ ಬಿ. ಡಿ. ಜತ್ತಿ.—ನೀವು ಇಲ್ಲಿ ಇರುವುದಕ್ಕಿಂತ ಹೆಚ್ಚು ವಿಷಯ ಕೇಳುತ್ತಾ ಇದ್ದೀರಿ. ಅದನ್ನು ವಿಚಾರ ಮಾಡಿ ಹೇಳಬೇಕಾಗುವುದು.

Gomal land available to certain villages in T.-Narasipur Taluk.

*Q.—214. Sri J. B. MALLARADHYA (Nanjangud).—

Will the Government be pleased to state :—

(*a*) the extent of gomal land available in the villages of Yeraganahalli, Dharmayyanahundi, Bannahalli of Mugur Hobli, T.-Narasipur Taluk;

(*b*) the number of heads of cattle in the above villages;

(*c*) whether any applications were received in the past for the cultivation of gomal land adjacent to Hiduvali S. Nos. 96, 98, 1050 in Yeraganahalli Village and if so, how were they disposed of;

(*d*) whether the land has been recently granted to one Puttappa, son of Subbappa, on the ground of his being a political sufferer;

(*e*) whether Government are aware that the genuine interest of the village cattle would suffer by this grant of land for cultivation ?

A.—Sri Kadidal MANJAPPA (Minister for Revenue).—

(*a*) The extent of gomal lands available are as follows :—

Village	*Extent*
Yaraganahally Dharmayyanahundy	0-27
Bannahally ...	69-30

(*b*) The number of heads of cattle are as follows :—

Village	*No. of heads of cattle.*
Yaraganahally ...	790
Bannahally ...	220

(*c*) There is no gomal land adjacent to S. Nos. 96, 98 and 105 except an unnumbered kharab. The applications for this land were rejected due to insufficiency of gomal.

(*d*) Yes.

(*e*) No.

ಶ್ರೀ ಜೆ. ಬಿ. ಮುರ್ಲಾರಾಧ್ಯ.—(ಸಿ) ಪ್ರಶ್ನೆಗೆ ಉತ್ತರವಾಗಿ ಹೇಳಿರುವಂತೆ ಗೋಮಾಳಕ್ಕೆ ಜಾಗ ಇಲ್ಲದೇ ಇರುವಾಗ ರಾಜಕೀಯದಲ್ಲಿ ನೊಂದವರಿಗೆ ಅಲ್ಲಿ ಜಮೀನು ಕೊಡುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲನೆಯದು ರಾಜಕೀಯದಲ್ಲಿ ನೊಂದವರು. ಎರಡನೆಯದು ಆ ಜಾಗ ಗೋಮಾಳಕ್ಕೆ ಲಾಯಕ್ಕಲ್ಲ, ಹಿಡುವಳಿ ಜಮೀನು ಗಳಿಂದ ಸುತ್ತುಗಟ್ಟಲ್ಪಟ್ಟಿದೆ, ಹಿಡುವಳಿದಾರರು ಅದನ್ನು ಆಕ್ರಮಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ, ಅದನ್ನು ಇಡುವುದರಿಂದ ಪ್ರಯೋಜನವಿಲ್ಲ ಎಂದು ಡೆಪ್ಯೂಟಿ ಕಮೀಷನರು ಸ್ಥಳ ಪರಿಶೀಲನೆಮಾಡಿ ತಿಳಿದುಕೊಂಡು ರಿಪೋರ್ಟ್ ಕೊಟ್ಟಿದ್ದಾರೆ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ರಾಜಕೀಯದಲ್ಲಿ ನೊಂದವರು ಕೇಳುವುದಕ್ಕೆ ಮುಂಚೆಯೇ ಬೇರೆ ಜನರು ಈ ಜಮೀನಿಗೆ ಅರ್ಜಿ ಹಾಕಿ ನಿರಾಕರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಉತ್ತರದಲ್ಲೇ ಕೊಟ್ಟಿದೆ.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಹಾಗಿದ್ದರೆ ಈ ಮನುಷ್ಯರಿಗೆ ಕೊಡುವುದಕ್ಕೆ ಇಲ್ಲದೇ ಇದ್ದ ಪ್ರತಿಬಂಧಕವೇನು ? ಮಿಕ್ಕವರಿಗೆ ಇದ್ದ ಪ್ರತಿಬಂಧಕವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಿಕ್ಕವರಿಗೆ ಆ ಸ್ಥಳದ ಆಜುಬಾಜು ಹಿಡುವಳಿದಾರರು ಪ್ರತಿಬಂಧಿಸುತ್ತಾ ಇದ್ದರು. ಸ್ಥಳೀಯ ಅಧಿಕಾರಿಗಳು ಅದನ್ನು ಇಡುವುದು ಸೂಕ್ತವಲ್ಲ ಎಂದು ಹೇಳಿದರು. ಸ್ಥಳ ಪರಿಶೀಲನೆ ಮಾಡಿದನಂತರ ಜಿಲ್ಲಾಧಿಕಾರಿಗಳು ಆ ಗೋಮಾಳವನ್ನು ಮೀಸಲಾಗಿಡುವುದರಿಂದ ಜಾನುವಾರುಗಳಿಗೆ ಸಹಾಯವಾಗುವುದಿಲ್ಲ, ಅದನ್ನು ಹಿಡುವಳಿದಾರರು ಆಕ್ರಮಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ತೀರ್ಮಾನಕ್ಕೆ ಬಂದು ಈ ರೀತಿ ಕೊಡಬೇಕೆಂದು ಹೇಳಿದರು.

ಶ್ರೀ ಜೆ. ಬಿ. ಮುರ್ಲಾರಾಧ್ಯ.—ಇವರಿಗೆ ಕೊಡುವಾಗ ಏನು ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಬೇರೆ ಜನಗಳು ಅರ್ಜಿ ಹಾಕಿದಾಗಲೂ ಇತ್ತು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆಗ ಸಾಕಾದಷ್ಟು ಜವಾಬ್ದಾರಿಯುಳ್ಳ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿರಲಿಲ್ಲ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಯಾವ ಊರಿನಲ್ಲಿ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—Unnumbered ಖರಾಬು, ಯರಗಾನಹಳ್ಳಿಯಲ್ಲಿ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಎಷ್ಟು ಎಕರೆ ?

ಶ್ರೀ ಕಡಿದಾಳ್ ಮಂಜಪ್ಪ.—ಮೂರು ಎಕರೆ 30 ಗುಂಟೆ.

Sri M. RAJASEKHARA MURTHY.—Is it not a fact that the land given is numberless kharab and not gomal land.

Sri Kadidal MANJAPPA.—Quite so.